ಪಾಲಿಕೆಯಾಗಿರಲಿ, ಕೆಎಂಸಿ ಆಗಿರಲಿ ಯಾವುದೇ ಆಸ್ಪತ್ರೆಯಲ್ಲಾಗಲೀ ಔಷಧಿಗಳ ಕೊರತೆ ಇಲ್ಲದ ಹಾಗೆ ನೋಡಿಕೊಳ್ಳತಕ್ಕ ಜವಾಬ್ದಾರಿ ಸರ್ಕಾರದ್ದು ಇದೆ. ಅದನ್ನು ಮಾಡುತ್ತೇವೆಂದು ತಮ್ಮ ಮೂಲಕ ಸದಸ್ಯರ ಗಮನಕ್ಕೆ ತರುತ್ತೇನೆ.

ಶ್ರೀ ಅಶೋಕ್ ಕಾಟ್ವೆ: 6 ಜನ ಸತ್ತಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಹೇಳುತ್ತಿದ್ದಾರೆ. ಹುಬ್ಬಳ್ಳಿಯಲ್ಲಿ 6 ಜನ ಸತ್ತಿದ್ದಾರೆ. ಈ ಕರುಳುಬೇನೆಯಿಂದ, ಕಾಲರಾದಿಂದ 6 ಜನ ಸತ್ತಿದ್ದಾರೆ. ನಿನ್ನೆ, ಮೊನ್ನೆ ಮೂರು ಜನ ಸತ್ತಿದ್ದಾರೆ.

ಅಧ್ಯಕ್ಷರು: ನೀವು ಸದನಕ್ಕೆ ಹೊಸಬರಲ್ಲ. ಶೂನ್ಯವೇಳೆಯಲ್ಲಿ ಚರ್ಚೆಗೆ ಅವಕಾಶವಿರುವುದಿಲ್ಲ. You cannot be an exception.

ಶ್ರೀ ಅಶೋಕ ಕಾಟ್ವೆ: ನೂರು, ನೂರು ಜನ ಕೆ.ಎಂ.ಸಿಯಲ್ಲಿ ಬಿದ್ದಿದ್ದಾರೆ. ಪೂಜಾರಿ ಎಂಬ 50 ವರ್ಷದ ವ್ಯಕ್ತಿ ಒಬ್ಬರು ಸತ್ತಿದ್ದಾರೆ.

ಐ) ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ ಪರೀಕ್ಷೆಗಳಲ್ಲಿ ವ್ಯಾಪಕವಾದಂಥ ಕಾಪಿ ನಡೆಯುತ್ತಿರುವುದು.

+ ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಸನ್ಮಾನ್ಯ ಅಧ್ಯಕ್ಷರೇ, ಬಹಳ ಮುಖ್ಯವಾದಂಥ ಒಂದು ವಿಷಯ. ಈಗ ಪಿ.ಯು.ಸಿ ಪರೀಕ್ಷೆಗಳು ನಡೆಯುತ್ತಾ ಇವೆ. ಮತ್ತೆ ಹಿಂದೆ ಎಸ್.ಎಸ್.ಎಲ್.ಸಿ ಪರೀಕ್ಷೆಗಳು ನಡೆದವು. ಈ ಪರೀಕ್ಷೆಗಳು ನಡೆಯತಕ್ಕ ಸಂದರ್ಭದಲ್ಲಿ ಎರಡು ಪ್ರಮುಖವಾದ ವಿಚಾರಗಳು ಪ್ರತಿ ಸಂದರ್ಭದಲ್ಲೂ ಬರುತ್ತಾ ಇತ್ತು. ಆದರೆ, ಯಾರೂ ಅಷ್ಟು ಗಂಭೀರವಾಗಿ ತೆಗೆದುಕೊಳ್ಳುತ್ತಾ ಇರಲಿಲ್ಲ. ಪರೀಕ್ಷೆಗಳ ನಡೆಯತಕ್ಕ ಸಂದರ್ಭದಲ್ಲಿ ಕಾಪಿ ಹೊಡೆಯತಕ್ಕ ಪರಿಸ್ಥಿತಿ ಎಷ್ಟು ವ್ಯಾಪಕವಾಗಿದೆ ಎಂದು ಹೇಳಿದರೆ, ಬಹಳ ಗಂಭೀರವಾದಂಥ ಪರಿಸ್ಥಿತಿ ಇವತ್ತು ಉಂಟಾಗಿದೆ. ಈ ಪರಿಸ್ಥಿತಿ ಎಷ್ಟರಮಟ್ಟಿಗೆ ಹೋಗಿದೆ ಎಂದರೆ, ಕಾಪಿ ಹೊಡೆಯತಕ್ಕ ವಿದ್ಯಾರ್ಥಿಗಳಿಗೆ ಪೋಷಕರು ಸಾರ್ವಜನಿಕರೆಲ್ಲಾ ಬೆಂಬಲ ಕೊಟ್ಟು, ಯಾರಾದರೂ ಉಪಾಧ್ಯಾಯರು ಹಿಡಿದರೆ, ಅವರನ್ನು ಹೋಗಿ, ಸ್ಕೂಲಿನಲ್ಲಿ ನುಗ್ಗಿ ಚಚ್ಚತಕ್ಕ ಹೊಡೆಯತಕ್ಕ ಪರಿಸ್ಥಿತಿ ಬಂದಿದೆ. ಮೊನ್ನೆ ಒಂದು ದಿವಸ ನನ್ನ ಕ್ಷೇತ್ರದಲ್ಲಿರತಕ್ಕ ಸರ್ಕಲ್ ಇನ್‌ಸ್ಪೆಕ್ಟರೊಬ್ಬರು ರಾತ್ರಿ 11 ಗಂಟೆಯಲ್ಲಿ ನಮ್ಮ ಮನೆಯ ಹತ್ತಿರ ಬಂದರು. ಅವರ ಬಟ್ಟೆಗಳೆಲ್ಲಾ ಹರಿದಿದ್ದವು. ನಾನು ಅವರನ್ನು ಏಕೆ ಎಂದು ಕೇಳಿದೆ. ಪರೀಕ್ಷೆ ನಡೆಯತಕ್ಕ ಸಂದರ್ಭದಲ್ಲಿ ಮೇಷ್ಟ್ರುಗಳು ಕಾಪಿ ಹೊಡೆಯುವುದಕ್ಕೆ ಬಿಡಲಿಲ್ಲ ಎಂದು 500 ಜನ ಗುಂಪು ಕಟ್ಟಿಕೊಂಡು ಹೋಗಿ ಆ ಮೇಷ್ಟ್ರುಗಳ ಮೇಲೆ ಬಿದ್ದರು. ಅವರನ್ನು ಬಿಡಿಸಿಕೊಂಡು ಬರಲಿಕ್ಕೆ ಸರ್ಕಲ್ ಇನ್‌ಸ್ಪೆಕ್ಟರ್ ಹೋದರೆ, ಅವರ ಮೇಲೆಯೂ ಬಿದ್ದು, ಬಟ್ಟೆಯೆಲ್ಲಾ ಹರಿದಿದ್ದಾರೆ. ಕಡೆಗೆ ಪಿಸ್ತೂಲು ಹಿಡಿದುಕೊಂಡು, ಅವರನ್ನು ರಕ್ಷಣೆ ಮಾಡಿಕೊಂಡು ಒಬ್ಬ, ಆ ಹೆಣ್ಣುಮಗಳು ಟೀಚರನ್ನು ಕರೆದುಕೊಂಡು ಬರತಕ್ಕ ಪರಿಸ್ಥಿತಿ

ಬಂತು. ನಾನು ಉದಾಹರಣೆ ಹೇಳಿದೆ. ಇಡೀ ರಾಜ್ಯದಲ್ಲಿ ಇದು ನಡೆಯುತ್ತಿದೆ, ಪತ್ರಿಕೆಗಳಲ್ಲಿ ಬಂದಿದೆ. ಎಲ್ಲಾ ಪತ್ರಿಕೆಗಳಲ್ಲಿ ಬಂದಿದೆ. ಇಡೀ ರಾಜ್ಯದಲ್ಲಿ ಈ ರೀತಿಯಾದಂಥ ಪರಿಸ್ಥಿತಿ ಉಂಟಾಗಿದೆ. ಈಗ ಪಿ.ಯು.ಸಿ ಪರೀಕ್ಷೆಗಳು ನಡೆಯುತ್ತಾ ಇದೆ. ಇಲ್ಲಿ ಎರಡು ಮುಖ್ಯವಾದಂಥ ಪ್ರಶ್ನೆಗಳು. ಪರೀಕ್ಷೆಗಳು ಯಾವಾಗ ಪ್ರಾರಂಭವಾದರೂ, ಮೇಷ್ಟ್ರುಗಳು ನಾವು ಮೌಲ್ಯಮಾಪನ ಕಾರ್ಯಕ್ಕೆ ಬಾಯ್‌ಕಾಟ್ ಮಾಡುತ್ತೇವೆಂದು ಹೇಳುವುದು ಇಲ್ಲವೆಂದರೆ ಪರೀಕ್ಷೆ ಬಾಯ್‌ಕಾಟ್ ಮಾಡುತ್ತೇವೆಂದು ಹೇಳುವುದು. ಅದರಲ್ಲೂ ಕಾಪಿ ಹೊಡೆಯುವುದು, ಪಿ.ಯು.ಸಿ. ಪರೀಕ್ಷೆಗಳಲ್ಲೂ ಕಾಪಿ. ಈ ರೀತಿ ವ್ಯಾಪಕವಾಗಿ ಕಾಪಿ ಹೊಡೆಯತಕ್ಕ ಪ್ರವೃತ್ತಿ, ಇದಕ್ಕೆ ಸಾರ್ವಜನಿಕರು ಬೆಂಬಲ ಕೊಡುತ್ತಿದ್ದಾರೆನ್ನುವುದು ಬಹಳ ನೋವಿನ ಸಂಗತಿ. ಹಲವಾರು ಸಂದರ್ಭಗಳಲ್ಲಿ ಅವರ ಪೇರೆಂಟ್ಸ್ ಕೂಡ ಬೆಂಬಲ ಕೊಡುತ್ತಿದ್ದಾರೆ. ಇವತ್ತು ಬಹಳ ನೋವಿನ ಸಂಗತಿ ಆಗುತ್ತಿದೆ. ಬಹುಶಃ ಇದಕ್ಕೆ ಕಾರಣ ಏನೆಂದರೆ, ಬಹಶಃ ಮೆರಿಟ್ ಖಾಯಿಲೆ ಇದು. ಈ ಮೆರಿಟ್ ಖಾಯಿಲೆಯಿಂದಾಗಿ, ಏನಾದರೂ ಮಾಡಿ ಮೆರಿಟ್ ಸಂಪಾದನೆ ಮಾಡಬೇಕೆಂಬ ಕಾರಣಕ್ಕೋಸ್ಕರ, ವ್ಯಾಪಕವಾಗಿ ಈ ವಿದ್ಯಾ ಇಲಾಖೆಯಲ್ಲಿ ನಡೆಯತಕ್ಕ ಹಲವಾರು ಭ್ರಷ್ಟಾಚಾರಗಳಲ್ಲಿ ಇದೂ ಒಂದು. ಬೋರ್ಡ್‌ಗಳಲ್ಲಿ ಮಾರ್ಕ್ಸ್ ಕಾರ್ಡ್ ತಿದ್ದುತ್ತಾರೆ, ಮೆರಿಟ್‌ಗಾಗಿ ಇದೆಲ್ಲಾ ವ್ಯವಸ್ಥೆ ನಡೆಯುತ್ತಾ ಇದೆ. ಅದಕ್ಕೋಸ್ಕರ ನಾನು ತಮ್ಮ ಮುಖಾಂತರ ಕೇಳತಕ್ಕಂಥಾದ್ದು ಈ ಕಾಪಿ ಹೊಡೆಯತಕ್ಕ ಪ್ರವೃತ್ತಿ, ಅದಕ್ಕೆ ಸಾರ್ವಜನಿಕರು ಕೊಡುತ್ತಿರುವ ಬೆಂಬಲದಿಂದ ಬಹಳ ಅಪಾಯಕರವಾದ ಪರಿಸ್ಥಿತಿಗೆ ಬಂದು ನಿಂತಿದೆ. ಅದಕ್ಕೋಸ್ಕರ ಇವೆಲ್ಲವನ್ನೂ ಗಮನಿಸಿ, ಇವತ್ತು ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ. ಕೆಲವು ವಿದ್ಯಾಸಂಸ್ಥೆಗಳಲ್ಲಿ ಮೇಷ್ಟ್ರುಗಳೇ ಕಾಪಿ ಹೊಡೆಯತಕ್ಕ ಪ್ರವೃತ್ತಿಯನ್ನು ಬೆಳೆಸಿಬಿಟ್ಟಿದ್ದಾರೆ. ಅದರಲ್ಲೂ ವಿಶೇಷವಾಗಿ ಖಾಸಗಿ ಸಂಸ್ಥೆಗಳು. ಏಕೆಂದರೆ, ಅವರಿಗೆ ರಿಸಲ್ಟ್ ಹೆಚ್ಚಿಗೆ ಬರಬೇಕು, ಹೆಚ್ಚಿಗೆ ಕ್ರೆಡಿಟ್ ಬರಬೇಕೆಂದು ಖಾಸಗಿ ಶಿಕ್ಷಣ ಸಂಸ್ಥೆಗಳ ಮ್ಯಾನೇಜ್‌ಮೆಂಟ್ ಮತ್ತು ಶಿಕ್ಷಕರೂ ಸೇರಿ ಅದಕ್ಕೆ ಪ್ರೋತ್ಸಾಹ ನೀಡುತ್ತಿದ್ದಾರೆ. ಹೀಗಾಗಿ ಎಲ್ಲಾ ರೀತಿಯಲ್ಲಿ ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲೂ ಕೂಡ ಬರತಕ್ಕ ಈ ಪರಿಸ್ಥಿತಿಯಲ್ಲಿ ನಾವು ಈ ಗಂಭೀರವಾದಂಥ ಅಪಾಯವನ್ನು ಗಮನಿಸಬೇಕಾಗುತ್ತದೆ. ಈ ಪ್ರವೃತ್ತಿ ಬೆಳೆದು, ಅದಕ್ಕೆ ಸಾರ್ವಜನಿಕರ ಬೆಂಬಲ ಸಿಕ್ಕಿ, ಪೋಷಕರ ಬೆಂಬಲ ಸಿಕ್ಕಿ, ಎಲ್ಲರ ಬೆಂಬಲ ಸಿಕ್ಕಿದರೆ ಏನಾಗಬಹುದು? ಏನು ಪರಿಸ್ಥಿತಿ, ಎಂತಹ ಗಂಭೀರ ಪರಿಸ್ಥಿತಿಗೆ ಬರಬಹುದು. ಶಿಕ್ಷಣದ ಪದ್ಧತಿ ಮತ್ತು ಶಿಕ್ಷಣದ ಗುಣಮಟ್ಟ ಎಷ್ಟು ಹಾಳಾಗಬಹುದು ಎಂಬುದು ಪ್ರಶ್ನೆ. ಹಾಗಾಗಿ ಈ ಎರಡು ಪ್ರವೃತ್ತಿಗಳನ್ನು ತಡೆಯಲಿಕ್ಕೆ ಸರ್ಕಾರ ಒಂದು ವ್ಯಾಪಕವಾದಂಥ ಕ್ರಮವನ್ನು ತೆಗೆದುಕೊಳ್ಳಬೇಕು. ಅದರಲ್ಲಿ ನನ್ನ ಸಲಹೆ ಏನೆಂದರೆ, ಯಾವ ಹೈಸ್ಕೂಲಿನಲ್ಲಿ ಪರೀಕ್ಷೆ ನಡೆಯುತ್ತದೆ, ಆ ಹೈಸ್ಕೂಲಿನಲ್ಲಿರತಕ್ಕ ಶಿಕ್ಷಕರನ್ನು ಇನ್ವಿಜಿಲೇಟರ್ ಆಗಿ ಹಾಕಬಾರದು. ಅದು ಖಾಸಗಿ ಇರಬಹುದು ಅಥವಾ ಸರ್ಕಾರಿ ಶಾಲೆ ಇರಬಹುದು. ಆ ಸ್ಕೂಲುಗಳಲ್ಲಿರತಕ್ಕ ಆ ಟೀಚರ್ಸ್, ಅಲ್ಲಿ

ಇನ್‌ವಿಜಿಲೇಟರ್ ಆಗಬಾರದು. ಆಗ ಇದನ್ನು ತಡೆಯಲಿಕ್ಕೆ ಸಾಧ್ಯವಾಗುತ್ತದೆ. ಮತ್ತು ಇಡೀ ಪ್ರವೃತ್ತಿಯನ್ನು ತಡೆಯಲಿಕ್ಕೆ ಒಂದು ಕಾರಣ, ಇರತಕ್ಕಂತಾದ್ದು ಮೆರಿಟ್. ಪ್ರತಿಯೊಂದಕ್ಕೂ ಮೆರಿಟ್ ಎಂಬ ಪ್ರಶ್ನೆಯಿಂದಾಗಿ ಇವತ್ತು ಮಾರ್ಕ್ಸ್ ಹೆಚ್ಚು ಬರಬೇಕೆಂಬ ಕಾರಣಕ್ಕೋಸ್ಕರ ಈ ಪ್ರವೃತ್ತಿ ಹೆಚ್ಚಾಗುತ್ತಾ ಇದೆ. ಈ ಮೆರಿಟ್ ಪದ್ಧತಿಯಲ್ಲಿ ಸೂಕ್ತ ರೀತಿಯಾದಂಥ ಪರಿಣಾಮಕಾರಿಯಾದಂಥ ಬದಲಾವಣೆ ತರುವುದಕ್ಕೆ ಸರ್ಕಾರ ಏನಾದರೂ ಕ್ರಮ ತೆಗೆದುಕೊಳ್ಳಬೇಕೆಂಬುದನ್ನು ತಮ್ಮ ಮುಖಾಂತರ ಸರ್ಕಾರವನ್ನು ಕೇಳುತ್ತಿದ್ದೇನೆ.

+ ಶ್ರೀ ಹೆಚ್.ಜಿ.ಗೋವಿಂದೇಗೌಡ (ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೇ, ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ. ತರಗತಿಗಳಲ್ಲಿ ಕಾಪಿ ಪ್ರಕರಣಗಳನ್ನು ತಡೆಯುವುದಕ್ಕಾಗಿ ಬಹುಶಃ ತಮಗೆಲ್ಲಾ ಗೊತ್ತಿದೆ. ಜಿಲ್ಲಾಧಿಕಾರಿಗಳು ಮತ್ತು ಪೋಲೀಸ್ ಅಧಿಕಾರಿಗಳನ್ನು ಒಳಗೊಂಡಂಥ ಒಂದು ಜಾಗೃತ ದಳವನ್ನು ಮಾಡಿರುತ್ತೇವೆ. ಹೀಗಾಗಿ ಪ್ರತಿಯೊಂದು ಜಿಲ್ಲೆಯಲ್ಲೂ ಸಹ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲೆಯ ಪೋಲೀಸ್ ಅಧಿಕಾರಿಗಳು ಮತ್ತು ಇತರ ಅಧಿಕಾರಿಗಳು ಸೇರಿದಂತೆ ಒಂದು ಜಾಗೃತ ದಳವನ್ನು ರಚಿಸಿ ಮಾಡಿರುವುದರಿಂದ ಈ ಕಾಪಿ ಪ್ರಕರಣ ಸಾಕಷ್ಟು ಕಡಿಮೆಯಾಗಿದೆ. ಬಹಳ ಹಿಂದಿನಿಂದಲೂ ಈ ಪಿಡುಗು ಇದ್ದೇ ಇತ್ತು. ಈಗ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದು ಈ ಒಂದು ಹೊಸ ವ್ಯವಸ್ಥೆಯನ್ನು ಮಾಡಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಈ ರೀತಿಯಾಗಿ ಜಾಗೃತ ದಳವನ್ನು ಮಾಡಿ ಅವರು ಕೂಡ ತುಂಬಾ ಶ್ರಮಪಟ್ಟು ಕೆಲಸವನ್ನು ಮಾಡುತ್ತಿದ್ದಾರೆ. ಜಿಲ್ಲಾಧಿಕಾರಿಗಳು, ಪೋಲೀಸ್ ಅಧಿಕಾರಿಗಳು ಮತ್ತು ನಮ್ಮ ಇಲಾಖೆಯ ಅಧಿಕಾರಿಗಳು ಇದು ನನ್ನದು ಕೆಲಸ ಎಂದು ತಿಳಿದು ಮಾಡುತ್ತಿದ್ದಾರೆ. ಆದರೂ ಎಷ್ಟು ರೀತಿಯಲ್ಲಿ ಮಾಡಿದರೂ ಸಹಾ ಸಾರ್ವಜನಿಕರಾಗಿ ನನ್ನ ಆಡಳಿತದಲ್ಲಿ ವ್ಯತ್ಯಾಸ ಇರುವುದನ್ನು ತಾವು ಹೇಳಿದ್ದೀರಿ. ಇನ್‌ವಿಜಿಲೇಟರ್ಸನ್ನು ಬದಲಾವಣೆ ಮಾಡಬೇಕು ಎಂದು ಹೇಳಿದ್ದೀರಿ. ಅದು ನಮ್ಮ ಇಲಾಖೆಗೆ ಸಂಬಂಧಪಟ್ಟಿರುವುದು. ಇದನ್ನು ನಾವು ಮಾಡುವುದಕ್ಕೆ ಸದಾ ನಿಮ್ಮ ಜೊತೆಯಲ್ಲಿ ಇದ್ದೇವೆ, ನಾವು ನಿಮ್ಮ ಜೊತೆಯಲ್ಲಿದ್ದೇವೆ. ನೀವು ನಮ್ಮ ಜೊತೆಯಲ್ಲಿದ್ದೀರಿ. ಇದನ್ನು ಆಡಳಿತದಲ್ಲಿ ಬದಲಾವಣೆ ಏನು ಮಾಡುವುದಕ್ಕೆ ಸಾಧ್ಯ, ಅದನ್ನು ಮಾಡತಕ್ಕಂಥ ದೃಷ್ಟಿಯಲ್ಲಿ ಸರ್ಕಾರ ಕೆಲಸ ಮಾಡುತ್ತಿದೆ. ಈಗ ತಾವು ಇವತ್ತು ಹೇಳಿರುವ ಹಾಗೆ ಅನೇಕ ಕಡೆ ಮಕ್ಕಳ ಭವಿಷ್ಯ ನಾನೇ ನಿರ್ವಹಣೆ ಮಾಡಬೇಕು ಎಂದು ಹೇಳಿ ಯಾರು ಪೋಷಕವರ್ಗದವರು ಇದ್ದಾರೆ, ಅವರೂ ಸಹ ಅಧಿಕಾರಿಗಳ ಮೇಲೆ ಹಲ್ಲೆ ಮಾಡಿರುವುದನ್ನೂ ನೋಡಿದ್ದೇವೆ. ಅನೇಕ ಕಡೆಗಳಲ್ಲಿ ಜೀಪು ಸುಟ್ಟಿರುವಂಥ ನಿದರ್ಶನಗಳು ತಮಗೆ ಗೊತ್ತಿದೆ. ಸರ್ಕಾರದ ವತಿಯಿಂದ ಯಾವುದೇ ರೀತಿ ಲೋಪವಾಗಿಲ್ಲ. 160 ಸೆನ್ಸಿಟೀವ್ ಸೆಂಟರ್ಸ್ ಈ ರಾಜ್ಯದಲ್ಲಿತ್ತು. 160 ಸೆನ್ಸಿಟೀವ್ ಸೆಂಟರ್ಸ್‌ಗಳು ಪಿ.ಯು.ಸಿ. ಮತ್ತು ಎಸ್.ಎಸ್.ಎಲ್.ಸಿ.ಯಲ್ಲಿ ಕಾಪಿ

ಹೊಡೆಯತಕ್ಕಂಥದ್ದು ಪ್ರತಿಷ್ಠಿತ ವಿದ್ಯಾಸಂಸ್ಥೆಗಳನ್ನು ನಡೆಸುವವರೂ ಸಹ ಇದರ ಬಗ್ಗೆ ಭಾಗಿಗಳಾಗಿದ್ದರು. ಯಾವದೇ ಮುಲಾಜಿಗೊಳಗಾಗಿ ಈ ಸರ್ಕಾರ ಇವತ್ತು 160 ಸೆನ್ಸಿಟೀವ್ ಸೆಂಟರ್‌ಗಳನ್ನು ಮುಚ್ಚುವ ಕಾರ್ಯಕ್ರಮವನ್ನು ನಾವು ಮಾಡಿದ್ದೇವೆ. ಸರ್ಕಾರದ ಅಧಿಕಾರಿಗಳು, ಎಲ್ಲಾ ಇಲಾಖೆಯ ಅಧಿಕಾರಿಗಳು ಉತ್ತಮವಾಗಿ ಸ್ಪಂಧಿಸಿಕೊಂಡು ಈ ಕೆಲಸ ಮಾಡುತ್ತಿದ್ದಾರೆ. ಬಂದಿರುವ ತೊಂದರೆ ಏನು ಎಂದರೆ ತಾವು ಹೇಳಿರುವ ಹಾಗೆ ನನ್ನ ಮಗುವಿಗೆ 85 ಪರ್‌ಸೆಂಟ್, 90 ಪರ್‌ಸೆಂಟ್ ಬರಬೇಕು ಎಂದು ಆ ಭಾವನೆಯಿಂದ ಕೆಲವು ಕಡೆ ಈ ಅಹಿತಕರವಾಗಿರುವ ವ್ಯವಸ್ಥೆ ನಿರ್ಮಾಣ ಮಾಡಿರುವುದು. ಇದಕ್ಕೆ ತಾವೆಲ್ಲರೂ ಸಹಕರಿಸಬೇಕು. ಸರ್ಕಾರ ನಮ್ಮದು ಎಂದ ತಕ್ಷಣ ನಮ್ಮದೇ ಅಲ್ಲ. ಇದು ಐದು ಕೋಟಿಯ ಜನರ ಜವಾಬ್ದಾರಿ. ನಮ್ಮೆಲ್ಲಾ ಚುನಾಯಿತ ಪ್ರತಿನಿಧಿಗಳು ಮೇಲೆ ಇರುವುದು. ಎಲ್ಲಿ ಅಹಿತಕರವಾಗಿರುವ ವಿಷಯ ನಡೆಯುತ್ತಿದೆ, ಕೂಡಲೇ ಸಂಬಂಧಪಟ್ಟಿರುವ ಜಿಲ್ಲಾಧಿಕಾರಿಗಳು ಪೋಲೀಸ್ ಇಲಾಖೆಯ ಅಧಿಕಾರಿಗಳು, ನಮ್ಮ ಇಲಾಖೆಯ ಅಧಿಕಾರಿಗಳ ಗಮನಕ್ಕೆ ತಂದಾಗ ಖಂಡಿತಾ ಅವರು ಯಾವುದೇ ರೀತಿ ನಿರ್ದಾಕ್ಷಿಣ್ಯವಾಗಿರುವ ಕೆಲಸ ಮಾಡಿದ್ದಾರೆ. ನನಗೆ ತುಂಬಾ ಮೆಚ್ಚುಗೆ ಇದೆ. ತಾವೆಲ್ಲಾ ನೋಡಿದ್ದೀರಿ. ಇತ್ತೀಚೆಗೆ ಈ ಒಂದು ಸೆನ್ಸಿಟೀವ್ ಸೆಂಟರ್‌ಗಳು ಏನು ಇವೆ ಇದನ್ನೆಲ್ಲಾ ಮುಚ್ಚಿದ್ದರಿಂದ ಹೆಚ್ಚಿನ ಒಂದು ಗಾಬರಿಯಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಸಾರ್ವಜನಿಕರಾಗಿರುವವರು ಇದರ ಬಗ್ಗೆ ಹೆಚ್ಚು ಗಮನ ಕೊಡಬೇಕು. ಮತ್ತು ಎಲ್ಲಿ ಅಹಿತಕರವಾಗಿರುವ ಘಟನೆಗಳು ನಡೆಯುತ್ತವೆ, ಆ ಕಡೆ ಗಮನ ಕೊಟ್ಟರೆ ಬಹುಶಃ ಇದೊಂದು ದೊಡ್ಡ ವಿಷಯವಲ್ಲ. ನಾವೆಲ್ಲರೂ ಸಹಕರಿಸಬೇಕು. ಸರ್ಕಾರದ ವತಿಯಿಂದ ತಾವೇನು ಇನ್‌ವಿಜಿಲೇಟರ್ಸನ್ನು ಮಾಡಬೇಕು ಎಂದು ಹೇಳಿದ್ದೀರಿ. ಹೈಸ್ಕೂಲಿನಲ್ಲಿರುವ ಉಪಾಧ್ಯಾಯರುಗಳನ್ನು ಬದಲಾವಣೆ ಮಾಡಿ ಪ್ರಾಥಮಿಕ ಶಾಲೆಯ ಉಪಾಧ್ಯಾಯರುಗಳನ್ನು ಅಲ್ಲಿ ನೇಮಕ ಮಾಡಿದ್ದೇವೆ. ಕಾರಣ ಏನೆಂದರೆ ಅವರೆಲ್ಲಾ ವಿಷಯಗಳನ್ನು ಹೇಳಿಕೊಡಬಹುದು ಎನ್ನುವ ಭಾವನೆಯಿಂದ ಮಾಡಿದ್ದೇವೆ. ಸರ್ಕಾರದ ವತಿಯಿಂದ ಯಾವುದೇ ಮಾಹಿತಿ ಕೊಟ್ಟರೂ ಅದನ್ನು ಸ್ವೀಕಾರ ಮಾಡುತ್ತೇವೆ. ತಾವೆಲ್ಲರೂ ಇದಕ್ಕೆ ಸಹಕರಿಸಬೇಕು ಎಂದು ಹೇಳಿ ಕೇಳಿಕೊಳ್ಳುತ್ತೇವೆ.

ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ): ಒಂದೇ ಒಂದು ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಈ ಪರೀಕ್ಷೆ ನಡೆಯುತ್ತದಲ್ಲಾ, ಆ ಸಂದರ್ಭದಲ್ಲಿ ಈಗ ಕಂಪ್ಯೂಟರ್ಸ್ ಎಲ್ಲಾ ಬಂದಿದೆ. ಮಾನಿಟರ್ಸನ್ನು ಇಟ್ಟು ಎಲ್ಲಿ ನೀವು ಸೆಂಟರ್‌ನಲ್ಲಿ ಮೈನ್ ಹೆಡ್ ಮಾಸ್ಟರ್ ಯಾರು ಇರುತ್ತಾರೆ ಆ ರೂಮಿಗೆ ಆ ಕ್ಷೇತ್ರದಲ್ಲಿ, ಕೇಂದ್ರದಲ್ಲಿ ನಡೆಯುವ ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಮಾನಿಟರ್ ಇಟ್ಟು ಕಂಪ್ಯೂಟರನ್ನು ಅಲ್ಲಿಟ್ಟರೆ ಅಲ್ಲಿ ಎಲ್ಲಾ ನಡೆಯುವುದು ಗೊತ್ತಾಗುತ್ತದೆ. ಯಾರೂ ಕಾಪಿ ಮಾಡುವುದಕ್ಕಾಗುವುದಿಲ್ಲ. ಆ ಪರಿಸ್ಥಿತಿ ಆಗುತ್ತದೆ. ಹೈರ್ ಮಾಡಬಹುದು. ವರ್ಷಕ್ಕೆ

ಒಂದು ಸಾರಿ ಪರೀಕ್ಷೆ ಬರುವ ಸಂದರ್ಭದಲ್ಲಿ ಯಾರಿಗಾದರೂ ಕಂಟ್ರಾಕ್ಟ್ ಕೊಟ್ಟರೆ ಮಾಡುವುದಕ್ಕಾಗುತ್ತದೆ. ಅದನ್ನೇನಾದರೂ ಮಾಡುವುದಕ್ಕೆ ಪ್ರಯತ್ನ ಪಡುತ್ತೀರೋ ಎಂದು ಕೇಳುತ್ತಿದ್ದೇನೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ: ಮಾನ್ಯ ಅಧ್ಯಕ್ಷರೇ, ಸಲಹೆ ಬಹಳ ಉತ್ತಮವಾಗಿದೆ. ಪರಿಶೀಲನೆ ಮಾಡುತ್ತೇವೆ. ಇದು ಪರಿಶೀಲನೆ ಎನ್ನುವುದಲ್ಲ. ಇದರ ಬಗ್ಗೆ ನಾವು ಕಠಿಣವಾಗಿರುವ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ 35 ಪರ್‌ಸೆಂಟ್ ತೆಗೆದುಕೊಳ್ಳುವುದಕ್ಕೂ ಯೋಗ್ಯತೆ ಇಲ್ಲದೇ ಇರುವ ಹುಡುಗರೆಲ್ಲಾ 80-90 ಪರ್‌ಸೆಂಟ್ ಮಾಡಿದರೆ ಈ ದೇಶ ಉದ್ಧಾರವಾಗುವುದಿಲ್ಲ. ನಿಜವಾಗಿಯೂ ಇದರ ಬಗ್ಗೆ ನೀವೆಲ್ಲರೂ ಸಹಕರಿಸಿ. ತಾವೇನು ಸಲಹೆ ಕೊಟ್ಟಿದ್ದೀರಿ, ಇದನ್ನು ಖಂಡಿತಾ ಇದರ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ.

ಒ) ದಾವಣಗೆರೆಯ ಎಂಟ್ರಸ್ಟ್ ಫೈನಾನ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯಿಂದ ವಂಚನೆ.

ಶ್ರೀ ಯು.ಬಿ.ಬಣಕಾರ್: ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಅನೇಕ ಖಾಸಗಿ ಹಣಕಾಸು ಕಂಪನಿಗಳು ಸಾರ್ವಜನಿಕ ವಂಚನೆ ಮಾಡಿದ ಪ್ರಕರಣಗಳನ್ನು ನಾವು ಸಾಕಷ್ಟು ಕಂಡಿದ್ದೇವೆ. ಅಂಥದ್ದರಲ್ಲಿ ಎಂಟ್ರಸ್ಟ್ ಫೈನಾನ್ಸ್ ಪ್ರೈವೇಟ್ ಲಿಮಿಟೆಡ್, ದಾವಣಗೆರೆ ಎಂಬ ಕಂಪನಿ, ದಾವಣಗೆರೆ, ರಾಣೆಬೆನ್ನೂರು, ಹಾವೇರಿ ಹಾಗೂ ಶಿವಮೊಗ್ಗ ನಗರದಲ್ಲಿ ತನ್ನ ಶಾಖೆಯನ್ನು ತೆರೆದು ಹಳ್ಳಿ ಪಟ್ಟಣಗಳಲ್ಲಿ ಸುಮಾರು ಆರು ಸಾವಿರ ನಿರುದ್ಯೋಗಿ ಯುವಕರನ್ನು, ಯುವತಿಯರನ್ನು ಏಜೆಂಟರನ್ನಾಗಿ ಮಾಡಿ ಅವರ ಮೂಲಕ ಗ್ರಾಮಾಂತರ ಪ್ರದೇಶದಲ್ಲಿ ಮುಗ್ಧ ಜನರಿಂದ ಹಣವನ್ನು ಉಳಿತಾಯ ಮಾಡಿಸಿಕೊಂಡು ಬಂದಿದೆ. ಅನೇಕ ಮಂದಿಗೆ ಕೆಲಸದಲ್ಲಿ ಕಿರುಕುಳವನ್ನೂ ಸಹ ಕೊಟ್ಟಿದ್ದಾರೆ. ಎರಡುಮೂರು ತಿಂಗಳ ಹಿಂದೆ ರಿಸರ್ವ್ ಬ್ಯಾಂಕ್‌ನ ಆಡಿಟ್‌ನವರು ಅಲ್ಲಿ ದೋಷ ಕಂಡುಬಂದಿದ್ದರಿಂದ ಸಾರ್ವಜನಿಕರಿಂದ ಠೇವಣಿ ಹಣವನ್ನು ಸ್ವೀಕರಿಸುವುದು ನಿಷೇಧಿಸಿದೆ ಎಂದು ತಿಳಿದುಬಂದಿದೆ. ಸಾಗೂ ಆ ಕಂಪನಿಯ ಇಬ್ಬರು ನಿರ್ದೇಶಕರ ಮೇಲೆ ವಂಚನೆಯ ಮೊಕದ್ದಮೆ ಈಗಾಗಲೇ ದಾಖಲೂ ಕೂಡ ಆಗಿದೆ. ಆದರೆ ಈಗ ಏನು ಹಣವನ್ನು ಏಜೆಂಟರ ಮೂಲಕ ಜನರು ತುಂಬಿದ್ದಾರೆ, ಆ ಏಜೆಂಟರಿಗೆ ಹಣ ವಾಪಸ್ ಮಾಡಲು ಏನು ಅವಧಿ ಮುಗಿದಿದೆ, ಅವರು ಹಣ ಪಾವತಿ ಮಾಡಲು ಒತ್ತಾಯ ಮಾಡುತ್ತಿರುವುದರಿಂದ ಹಾಗೆ ಕಂಪನಿಯಿಂದ ಏನು ಜನರು ಹಣವನ್ನು ಕಟ್ಟಿದ್ದಾರೆ, ಅವರಿಗೆ ಹಣವನ್ನು ಕೊಡಿಸುವ ಬಗ್ಗೆ ಹಾಗೂ ಇದ್ದ ಕಂಪನಿಗಳು ಮುಂದೆ ಜನರಿಗೆ ಮೋಸ ಮಾಡದಂತೆ ಎಚ್ಚರಿಕೆ ವಹಿಸಲು ಮಾನ್ಯ ಸಹಕಾರ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ಮಾನ್ಯ ಶಾಸಕರು ತಂದ ಒಂದು ಸಲಹೆ ಪ್ರಕಾರ ಖಂಡಿತವಾಗಿಯೂ ಅದರ ಮೇಲೆ ಕ್ರಮ